# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ ಐವನ್ 'ಡಿ'ಸೋಜಾ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 946 |
| ಉತ್ತರಿಸಬೇಕಾದ ದಿನಾಂಕ | 17.12.2024 |
| ಉತ್ತರಿಸಬೇಕಾದವರು | ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ಸೈಟ್ ಹಂಚಿಕೆ ಮತ್ತು ಪರವಾನಿಗೆ ನೀಡುವಲ್ಲಿ ವ್ಯಾಪಕ ಭ್ರಷ್ಟಾಚಾರವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಎಷ್ಟು ಅಧಿಕಾರಿಗಳ ಮೇಲೆ ಭ್ರಷ್ಟಾಚಾರದ ಕೇಸುಗಳು ದಾಖಲು ಆಗಿವೆ; ಎಷ್ಟು ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಲಾಗಿದೆ. ಕೈಗೊಂಡು ಕ್ರಮಗಳ ಬಗ್ಗೆ (ವಿವರ ನೀಡುವುದು). | ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ಸೈಟು ಹಂಚಿಕೆ ಮತ್ತು ಪರವಾನಗಿ ನೀಡುವಲ್ಲಿ ಕರ್ತವ್ಯ ಲೋಪ ಎಸಗಿ ಭ್ರಷ್ಟಚಾರದ ಕೇಸುಗಳು ದಾಖಲಾಗಿರುವ ಪ್ರಕರಣಗಳ ಸಂಖ್ಯೆ:02.<br><br>ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಒಟ್ಟು 6 ಜನ ಅಧಿಕಾರಿ / ಸಿಬ್ಬಂದಿಗಳ ವಿರುದ್ಧ ಬಳ್ಳಾರಿಯ ಕರ್ನಾಟಕ ಲೋಕಾಯುಕ್ತ ಪೋಲೀಸ್ ಠಾಣೆ ಅಪರಾಧ ಸಂಖ್ಯೆ:05/2024 ದಾಖಲಾಗಿರುತ್ತದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ: ನಅಇ 65 ಗುಅಪ್ರಾ 2024, ದಿನಾಂಕ:07.12.2024ರ ಆದೇಶದಲ್ಲಿ ಶ್ರೀ ರಮೇಶ್ ವಟಗಲ್, ಆಯುಕ್ತರು, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ (ಮೂಲ ಹುದ್ದೆ ಕೆ.ಎಂ.ಎ.ಎಸ್., ಪೌರಾಯುಕ್ತರು), ಮತ್ತು ಶ್ರೀ ಖಾಜಿ ಖಾಜಾ ಹುಸೇನ್, ಕಿರಿಯ ಅಭಿಯಂತರರು, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ ಇವರನ್ನು ದಿನಾಂಕ:25.04.2024 ರಿಂದಲೇ ಜಾರಿಗೆ ಬರುವಂತೆ ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಲಾಗಿದೆ.<br><br>ಬೀದರ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಒಟ್ಟು 02 ಜನ ಅಧಿಕಾರಿ / ಸಿಬ್ಬಂದಿಗಳ ವಿರುದ್ಧ ಕರ್ನಾಟಕ ಲೋಕಾಯುಕ್ತರು, ಬೀದರ ಪೋಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ:08/2024 ದಾಖಲಾಗಿರುತ್ತದೆ.<br><br>ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಿವೇಶನ ಹಂಚಿಕೆಯಲ್ಲಿ ಅಕ್ರಮ ಮಾಡಲಾಗಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ಸದರಿ ಪ್ರಾಧಿಕಾರದ ಹಿಂದಿನ ಆಯುಕ್ತರಾದ ಶ್ರೀ ದಿನೇಶ್ ಕುಮಾರ್ ಇವರನ್ನು ಸಿ.ಅ.ಸು ಇಲಾಖೆಯು ಸೇವೆಯಿಂದ ಅಮಾನತುಗೊಳಿಸಿದೆ.<br>ಮುಂದುವರೆದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಿವೇಶನ ಹಂಚಿಕೆಯಲ್ಲಿ ಅಕ್ರಮ ನಡೆದಿದೆ ಎನ್ನಲಾದ ಬಗ್ಗೆ, ತನಿಖೆ ನಡೆಸಲು ಸರ್ಕಾರದ ಅಧಿಸೂಚನೆ ಸಂಖ್ಯೆ:ಹೆಚ್‌ಡಿ 87 ಪಿಸಿಇ 2024, ದಿನಾಂಕ:14.07.2024 ರನ್ವಯ ಶ್ರೀ ಪಿ.ಎನ್.ದೇಸಾಯಿ, ನಿವೃತ್ತ ನ್ಯಾಯಾಧೀಶರು ಇವರ ನೇತೃತ್ವದಲ್ಲಿ ಏಕಸದಸ್ಯ ವಿಚಾರಣಾ ಆಯೋಗ ರಚಿಸಲಾಗಿದ್ದು, ಮಾನ್ಯ ಆಯೋಗವು ವರದಿ ಸಲ್ಲಿಸಿದ ನಂತರ ಸದರಿ ವರದಿಯನ್ನಾಧರಿಸಿ ನಿಯಮಾನುಸಾರ ಮುಂದಿನ ಕ್ರಮ ಜರುಗಿಸಲಾಗುವುದು. |

| | | |
|---|---|---|
| ಆ) | ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ CA ಸೈಟ್ಗಳನ್ನು ಹಂಚುವಾಗ ಯಾವ ನಿಯಮಗಳನ್ನು ಅನುಸರಿಸಲಾಗುತ್ತದೆ; (ವಿವರ ನೀಡುವುದು) ಲೇ ಔಟ್‌ಗಳಿಗೆ ಪರವಾನಿಗೆ ನೀಡುವಾಗ ನೀಡಬೇಕಾದ ಸೈಟ್‌ಗಳನ್ನು ನೀಡದಿರುವುದು ನಿಜವೇ (ವಿವರ ನೀಡುವುದು). | ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ CA ಸೈಟ್ಗಳನ್ನು ಹಂಚುವಾಗ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಾಗರೀಕ ಸೌಲಭ್ಯಗಳ (ಸಿ ಎ) ನಿವೇಶನಗಳ ಹಂಚಿಕೆ) ನಿಯಮಗಳು 1991 ರನ್ವಯ ಹಂಚಿಕೆ ಮಾಡಲಾಗುವುದು. ಲೇ ಔಟ್‌ಗಳಿಗೆ ಪರವಾನಗಿ ನೀಡಿ ವಿನ್ಯಾಸದಲ್ಲಿನ ಕಾಮಗಾರಿಗಳು ಪೂರ್ಣಗೊಂಡ ನಂತರ ಪೂರ್ಣ ನಿವೇಶನಗಳನ್ನು ಬಿಡುಗಡೆ ಮಾಡಲಾಗುತ್ತಿದೆ. |
| ಇ) | ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಅಧಿಕಾರಿಗಳ ಕೊರತೆಯಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಗಳು ಉಂಟಾಗಿದ್ದು, ಈ ಬಗ್ಗೆ ಕೈಗೊಂಡ ಕ್ರಮವೇನು; ಎಷ್ಟು ಹುದ್ದೆಗಳು ಬಾಕಿ ಇವೆ. (ವಿವರ ನೀಡುವುದು) | **ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ಪ್ರಸ್ತುತ ಖಾಲಿ ಹುದ್ದೆಗಳ ಮಾಹಿತಿ** |

| ಕ್ರ. ಸಂ | ಪ್ರಾಧಿಕಾರದ ಹೆಸರು | ಮಂಜೂರಾದ ಹುದ್ದೆಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ | ಹೊರಗುತ್ತಿಗೆ ಆಧಾರದ ಮೇಲೆ ನೇಮಕವಾಗಿರುವ ಹುದ್ದೆಗಳು |
|---|---|---|---|
| 01 | ಬಾಗಲಕೋಟೆ | 09 | - |
| 02 | ಬೆಳಗಾವಿ | 20 | - |
| 03 | ಬಳ್ಳಾರಿ | 25 | - |
| 04 | ವಿಜಯಪುರ | 09 | - |
| 05 | ಚಿಕ್ಕಮಗಳೂರು | 03 | 03 |
| 06 | ಚಿತ್ರದುರ್ಗ | 10 | - |
| 07 | ದಾವಣಗೆರೆ-ಹರಿಹರ | 20 | ಇವುಗಳಲ್ಲಿ 16 ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ನೇಮಕವಾಗಿದ್ದು, ಇದರಿಂದ 04 ಹುದ್ದೆಗಳು ಮಾತ್ರ ಖಾಲಿಯಿರುತ್ತವೆ. |
| 08 | ಗದಗ-ಬೆಟಗೇರಿ | 10 | - |
| 09 | ಕಲಬುರಗಿ | 27 | - |
| 10 | ಹೊಸಪೇಟೆ | 06 | - |
| 11 | ಕೆ.ಜಿ.ಎಫ್ | 06 | - |
| 12 | ಕೋಲಾರ | 05 | - |
| 13 | ಮಂಡ್ಯ | 15 | - |
| 14 | ಮಂಗಳೂರು | 19 | - |
| 15 | ಮೈಸೂರು | 248 | - |
| 16 | ರಾಯಚೂರು | 08 | - |
| 17 | ಶಿವಮೊಗ್ಗ-ಭದ್ರಾವತಿ | 19 | - |
| 18 | ತುಮಕೂರು | 10 | - |
| 19 | ಶಿರಾ | 10 | - |
| 20 | ಉಡುಪಿ | 07 | ಹೊರಗುತ್ತಿಗೆ ಆಧಾರದ ಮೇಲೆ 07 ಹುದ್ದೆಗಳಿಗೂ ನೇಮಿಸಿಕೊಳ್ಳಲಾ |

| | | | |
|---|---|---|---|
| | | | ಗಿದೆ. |
| 21 | ಕಾರವಾರ | ಖಾಯಂ ಸಿಬ್ಬಂದಿ ಯಾರು ಇರುವುದಿಲ್ಲ. | ಮಂಜೂರಾದ ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಂಡು ಕೆಲಸ ನಿರ್ವಹಿಸಲಾಗುತ್ತಿದೆ. |
| 22 | ಮಡಿಕೇರಿ | 02 | - |
| 23 | ವಿಜಯಪುರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ತೋರಣಗಲ್ಲು | 10 | - |
| 24 | ಯಾದಗಿರಿ | 01 | - |
| 25 | ಚಾಮರಾಜನಗರ-ರಾಮಸಮುದ್ರ | 02 | - |
| 26 | ಚಿಕ್ಕಬಳ್ಳಾಪುರ | 04 | - |
| 27 | ಹಾವೇರಿ | 06 | - |
| 28 | ಕೊಪ್ಪಳ | 05 | - |
| **ಒಟ್ಟು ಖಾಲಿ ಇರುವ ಹುದ್ದೆಗಳ ಮಾಹಿತಿ** | | **516** | |

ರಾಜ್ಯದ ಹಲವಾರು ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ಕೆಲವೊಂದು ಹುದ್ದೆಗಳು ಖಾಲಿ ಇದ್ದಾಗ್ಯೂ ಸದರಿ ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಅಗತ್ಯ ಸಿಬ್ಬಂದಿಗಳನ್ನು ನೇಮಿಸಿಕೊಂಡು ಸಾರ್ವಜನಿಕರಿಗೆ ಯಾವುದೇ ರೀತಿಯ ತೊಂದರೆ ಉಂಟಾಗದಂತೆ ಆಯಾಯಾ ನಗರಾಭಿವೃದ್ಧಿ ಪ್ರಾಧಿಕಾರಗಳು ತಮ್ಮ ದೈನಂದಿನ ಆಡಳಿತವನ್ನು ನಡೆಸುತ್ತಿವೆ.

| | | |
|---|---|---|
| ಈ) | ನಗರಾಭಿವೃದ್ಧಿ ಇಲಾಖೆಯಲ್ಲಿ ಏಜೆಂಟರ್‌ಗಳ ಸಂಖ್ಯೆ ತುಂಬಾ ಜಾಸ್ತಿಯಾಗಿದ್ದು, ಇವರು ಸಾರ್ವಜನಿಕರಿಂದ ಹಣ ವಸೂಲಿ ಮಾಡುತ್ತಿರುವ ಬಗ್ಗೆ, ಕೈಗೊಂಡಿರುವ ಕ್ರಮವೇನು? (ವಿವರ ನೀಡುವುದು) | ಇಂತಹ ಪ್ರಕರಣಗಳು ವರದಿಯಾಗಿರುವುದಿಲ್ಲ. |

ಸಂಖ್ಯೆ : ನಅಇ 224 ಗುಅಪ್ರಾ 2024

**(ಬಿ.ಎಸ್. ಸುರೇಶ)**
ನಗರಾಭಿವೃದ್ಧಿ ಮತ್ತು
ನಗರ ಯೋಜನೆ ಸಚಿವರು